

ಡಾ.ವಿನೋದ ಛಬ್ಬಿ

ಹೆಚ್ಚಿನವರಿಗೆ ಮದುವೆ ಬೇರೆ, ದಾಂಪತ್ಯ ಬೇರೆ ಎನ್ನುವ ಕಲ್ಪನೆ ಇರುವುದಿಲ್ಲ.

# 90: ಕೆಲವು ಪದ, ನೂರು ಅರ್ಥ

ಲೋಚನ್ ಲೂಸಿ ದಾಂಪತ್ಯ ಚಿಕಿತ್ಸೆ ಪಡೆಯುತ್ತಿದ್ದಾರೆ. ಲೂಸಿಯು ಲೋಚನನನ್ನು ಬಯ್ಯುತ್ತಿರುವುದರ ಹಿಂದೆ ಅವನು ಸಂಬಂಧಕ್ಕೆ ತನ್ನ ಬದ್ಧತೆಯನ್ನು ಒಪ್ಪಿಕೊಳ್ಳಲು ಹಿಂದೇಟು ಹಾಕಿದ್ದೇ ಕಾರಣ ಎಂದು ಗೊತ್ತಾಯಿತು. ಸಂಗಾತಿಯೊಡನೆ ಮುಖಾಮುಖಿಯಾಗಿ ಇರುವಾಗ ಆಗುತ್ತಿರುವ ಒಳಾನುಭವವನ್ನು ಬರೆದು ಪ್ರತ್ಯೇಕವಾಗಿ ತೋರಿಸಲು ಹೇಳಿದೆ.

ಅವರು ಬರೆಯುತ್ತಿರುವಾಗ ಲೂಸಿ ಹೇಳಿದ ಮಾತನ್ನು ಮೆಲಕುಹಾಕುತ್ತಿದ್ದೆ. ತನ್ನನ್ನು ನಂಬಿದ್ದವಳನ್ನು ಮದುವೆಯಾಗಲು ಹಿಂದೇಟು ಹಾಕಿದ್ದರಿಂದ ಲೂಸಿ ಅತೀವ ತಿರಸ್ಕಾರಕ್ಕೆ ಒಳಗಾಗಿದ್ದಾಳೆ. ತೀವ್ರ ಘಾಸಿಯಾಗಿ ಅವನಿಂದ ದೂರವಾಗಿದ್ದಾಳೆ. ಆದರೆ ಲೋಚನ್ ಒಂದೇ ಸಮನೆ ಬೆನ್ನು ಬಿಡದಿದ್ದುದರಿಂದ ಮದುವೆಗೆ ಒಪ್ಪಿದ್ದಾಳೆ. ಅವನ ಬಗೆಗಿನ ಶಂಕೆಗಳು ನಿವಾರಣೆಯಾಗದೆ ಅವನನ್ನು ಬಾಳಸಂಗಾತಿಯನ್ನಾಗಿ ಒಪ್ಪಿಕೊಳ್ಳಲು ಕಾರಣ ಏನಿರಬಹುದು? ಅಷ್ಟರಲ್ಲಿ ಇಬ್ಬರೂ ತಮ್ಮ ಚೀಟಿಗಳನ್ನು ಒಪ್ಪಿಸಿದರು.

ಲೋಚನ ಬರೆದಿದ್ದ: 'ಇವಳನ್ನು ಕಾಪಾಡಿಟ್ಟುಕೊಳ್ಳಲು ಎಷ್ಟೆಷ್ಟು ಪ್ರಯತ್ನ ಮಾಡಬೇಕಾಗುತ್ತೋ ಕಾಣೆ. ಅಷ್ಟು ಮಾಡಿದರೂ ಇವಳಿಂದ ಹೀಯಾಳಿಕೆ ತಪ್ಪುವುದಿಲ್ಲ. ಇದರಿಂದ ಯಾವಾಗ ಬಿಡುಗಡೆ ಸಿಗುತ್ತೋ ಗೊತ್ತಿಲ್ಲ.' ಇದರರ್ಥ ಏನಿರಬಹುದು? ಲೋಚನನಿಗೆ ದಾಂಪತ್ಯ ಸಂಬಂಧದ ಬಗೆಗೆ ಇನ್ನೂ ಅನಿಶ್ಚಿತತೆ, ಸಂದಿಗ್ಧತೆ ಕಾಡುತ್ತಿದೆ. ಹಾಗಾಗಿ ಲೂಸಿಯೊಡನೆಯ ನಂಟನ್ನು ಒಂದು ಕಡೆ ಬೇಕೆಂದೂ ಇನ್ನೊಂದು ಕಡೆ ಬೇಡವೆಂದೂ ಸಂದೇಶ ಕೊಡುತ್ತಿದ್ದಾನೆ. ಈ ಸಂದಿಗ್ಧತೆ ಎಲ್ಲಿಂದ ಹಾಗೂ ಹೇಗೆ ಬಂದಿರಬಹುದು ಎಂದು ಯೋಚಿಸಿದೆ. ಹಾಗೆಯೆ, 'ಇದರಿಂದ' ಬಿಡುಗಡೆ ಅಂದರೆ ಯಾವುದರಿಂದ? ಇವಳ ಹಿಂಸೆಯಿಂದಲೋ ಅಥವಾ ಸ್ವತಃ ಇವಳಿಂದಲೋ? ಹಟಮಾಡಿ ಒಲಿಸಿಕೊಂಡವನಿಗೆ ಸಂಬಂಧ ಇಷ್ಟೊಂದು ಭಾರ ಹೇಗಾಯಿತು? ಇದನ್ನು ಹುಡುಕಿ ತೆಗೆಯಬೇಕು ಎಂದುಕೊಂಡೆ. ಹಾಗೂ, 'ಅವಳನ್ನು ಕಾಪಾಡಿಕೊಳ್ಳಲು' ಹೆಣಗುವುದನ್ನು ನೋಡಿದರೆ, ಮುಂಚೆ ಅವಳನ್ನು ಕಳೆದುಕೊಂಡಿದ್ದಾಗ ಇದ್ದ ಮನಃಸ್ಥಿತಿಯನ್ನು ಈಗಲೂ ಹೊಂದಿದ್ದಾನೆ, ಅಲ್ಲದೆ ಎಲ್ಲೋ ಒತ್ತಟ್ಟಿಗೆ ಹತಾಶೆಯೂ ಇಣುಕುತ್ತಿದೆ.

ಲೂಸಿ ಹೀಗೆ ಬರೆದಿದ್ದಳು: 'ನೀನು ನನ್ನನ್ನು ಅರ್ಥಮಾಡಿಕೊಳ್ಳಲಾರೆ. ನನ್ನ ನೋವು ನಿನಗೆಂದೂ ಅರ್ಥವಾಗುವುದಿಲ್ಲ. ನಿನಗೆ ನೋವು ಕೊಡುವುದು ಗೊತ್ತೇ ಹೊರತು ಅದನ್ನು ನಿವಾರಿಸುವ ಸಾಮರ್ಥ್ಯ ನಿನಗಿಲ್ಲ. ನನ್ನನ್ನು ಸಾಂತ್ವನಗೊಳಿಸಲಾರೆ. ಹಾಗಾಗಿ ನನ್ನ ನೋವನ್ನು ನಿನ್ನಲ್ಲಿ ಹಂಚಿಕೊಳ್ಳಲಾರೆ. ನನ್ನ ಈ ದುರದೃಷ್ಟಕ್ಕೆ ನಿನ್ನನ್ನು ಬೈಯುತ್ತಿದ್ದೇನೆ.' ಇದರರ್ಥ ಏನು? ಅವನು ಅರ್ಥಮಾಡಿಕೊಳ್ಳದೆ ಇರುವುದರಿಂದ ಅವಳಲ್ಲಿ ಹತಾಶೆ ಮಡುಗಟ್ಟಿದೆಯೇನೋ ಸರಿ, ಆದರೆ ಇದನ್ನೇ ಇನ್ನೊಂದು ಕಡೆಯಿಂದ ಯೋಚಿಸಿದರೆ ಏನು ಹೊಳೆಯುತ್ತದೆ? ನೀನು ನನ್ನನ್ನು ಅರ್ಥಮಾಡಿಕೊಂಡರೆ ನಿನ್ನ ಮೇಲಿನ ಕಹಿ ಕಡಿಮೆಯಾಗುತ್ತದೆ ಎಂದು ಹೇಳುತ್ತಿದ್ದಾಳೆ. ಈ ವಿಷಯವನ್ನು ಲೋಚನನಿಗೆ ಅರ್ಥಮಾಡಿಸಿಕೊಡಲೆ? ಹಾಗೆ ಮಾಡಿದರೆ ಪರಿಣಾಮ? ಅವಳ ಈ ಸ್ಥಿತಿಗೆ ನೀನೇ ಕಾರಣ ಎಂದು ಲೋಚನನಿಗೆ ಹೊಣೆ ಹೊರಿಸಿದಂತಾಗುತ್ತದೆ; ಅದರಿಂದ ಅವನ ತಪ್ಪಿತಸ್ಥ ಭಾವ ಜಾಗೃತವಾಗಿ ಆತಂಕ ಇನ್ನೂ ಹೆಚ್ಚಾಗುವ ಸಂಭವವಿದೆ.

ಆ ಚೀಟಿಗಳಲ್ಲಿದ್ದ ಇನ್ನೊಂದು ವಿಷಯ ನನ್ನ ಗಮನ ಸೆಳೆಯಿತು. ಇಬ್ಬರೂ ಬರೆದದ್ದನ್ನು ಹೋಲಿಸಿದರೆ ಒಂದು ಸಾಮ್ಯ ಹಾಗೂ ಒಂದು ವ್ಯತ್ಯಾಸ ಎದ್ದುಕಾಣುತ್ತಿದ್ದವು. ಸಾಮ್ಯವೇನೆಂದರೆ, ಇಬ್ಬರೂ ಮದುವೆಗೆ ಮುಂಚೆ ಆದ ಜಗಳದ ನಂತರದ ಮನಃಸ್ಥಿತಿಯನ್ನೇ ಈಗಲೂ ಹೊಂದಿದ್ದಾರೆ; ಆಗ ಉಂಟಾದ ಆದರೆ ಇನ್ನೂ ಮಾಯದ– ಗಾಯಗಳನ್ನು ಈಗಲೂ ನೆಕ್ಕಿಕೊಳ್ಳುತ್ತಿದ್ದಾರೆ. ವ್ಯತ್ಯಾಸವೇನೆಂದರೆ, ಲೋಚನನ ಅನಿಸಿಕೆಗಳು ಅವನ ಬಗೆಗೆ ಮಾತ್ರವಿದ್ದು, ತನಗಾಗಿರುವ ಸಂಕಷ್ಟದಿಂದ ಹೇಗೆ ಪಾರಾಗಲಿ ಎನ್ನುತ್ತ ಲೂಸಿಯನ್ನು ಹೊರಗಿಟ್ಟರೆ, ಲೂಸಿಯ ಅನಿಸಿಕೆಗಳು ಲೋಚನನನ್ನೇ ನೇರವಾಗಿ ಉದ್ದೇಶಿಸಿದ್ದು, ಅವನನ್ನೂ ಒಳಗೊಂಡಿವೆ. ಚಿಕ್ಕದಾಗಿ ಹೇಳಬೇಕೆಂದರೆ, ಲೋಚನನ ಗಮನವು ತನ್ನ ಬಗೆಗೆ ಇದ್ದರೆ ಲೂಸಿಯ ಗಮನ ಸಂಬಂಧದ ಬಗೆಗಿದೆ. ಅಂದರೆ ಇಬ್ಬರ ಉದ್ದೇಶಗಳು ವಿಭಿನ್ನ ದಿಕ್ಕಿಗೆ ಮುಖಮಾಡಿವೆ. ಈ ವಿಭಿನ್ನತೆಯನ್ನು ಚಿಕಿತ್ಸೆಯಲ್ಲಿ ಹೇಗೆ ಅಳವಡಿಸಿಕೊಳ್ಳುವುದು ಎಂದು ಯೋಚಿಸಿದೆ.

'ಲೂಸಿ, ಒಂದು ವಿಷಯ ಸ್ಪಷ್ಟ ಮಾಡಿಕೊಳ್ಳಲಿಕ್ಕಿತ್ತು...' ಎಂದು ಶುರುಮಾಡಿದೆ. 'ಲೋಚನ ನಿಮ್ಮನ್ನು ಮದುವೆಯಾಗಲು ಹಿಂದೆಮುಂದೆ ನೋಡಿದಾಗ ನೀವು ತಿರಸ್ಕಾರಕ್ಕೆ ಒಳಗಾಗಿ ಸಿಡಿದೆದ್ದು ದೂರವಾದಿರಿ ಅಂತ ಹೇಳಿದಿರಿ. ನಂತರ ನಿಮ್ಮನ್ನು ಒಲಿಸಿಕೊಳ್ಳಲು ಅವರು ನಿಮ್ಮಹಿಂದೆ ಬಿದ್ದಿದ್ದರೂ ನೀವು ದೂರವಾಗೇ ಇದ್ದಿರಿ. ಅದಕ್ಕೇನು ಕಾರಣ ಇರಬಹುದು?' ಲೂಸಿ ಯೋಚಿಸಿ ಉತ್ತರಿಸಿದಳು. 'ಇವನು ನನ್ನನ್ನು ಪ್ರೀತಿಸಿದ್ದಾನೆಯೇ ವಿನಾ ನನ್ನನ್ನು ಅರ್ಥಮಾಡಿಕೊಂಡಿಲ್ಲ. ನನಗೆ ಏನು ಬೇಕು ಎಂಬುದನ್ನು ಇವನು ಯೋಚಿಸಿಲ್ಲ. ಅಲ್ಲದೆ ನಮ್ಮಿಬ್ಬರ ಸಂಬಂಧವನ್ನು ಮುಂದೆ ಯಾವ ದಿಕ್ಕಿನಲ್ಲಿ ಕರೆದುಕೊಂಡು ಹೋಗಬೇಕೆನ್ನುವ ದೂರದೃಷ್ಟಿ ಅವನಲ್ಲಿಲ್ಲ. ಹಾಗಾಗಿ ಇವನೊಡನೆ ನನಗೆ ಭವಿಷ್ಯವಿಲ್ಲ ಎಂದು ಬಲವಾಗಿ ಅನಿಸಿತು. ಅದಕ್ಕೆ ಅವನಿಂದ ದೂರವಾದೆ.'

"ಹಾಗಾದರೆ ಅವರು ನಿಮ್ಮ ಬೆನ್ನುಹತ್ತಿದಾಗ ಅದನ್ನೇ ಸ್ಪಷ್ಟಪಡಿಸಬಹುದಿತ್ತಲ್ಲ? 'ನಾವಿಬ್ಬರೂ ಪರಸ್ಪರ ಪ್ರೀತಿಸುತ್ತೇವೆಯೇ ವಿನಾ ಅರ್ಥಮಾಡಿಕೊಂಡಿಲ್ಲ. ಹಾಗಾಗಿ ನಾವು ಮದುವೆಯಾದರೂ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಹೀಗೆಯೇ ಸ್ನೇಹಿತರಾರೋಣ' ಎಂದು ಹೇಳಿ ಅಂತರ ಕಾಪಾಡಿಕೊಳ್ಳಬಹುದಿತ್ತಲ್ಲ? ಆದರೂ ಮದುವೆಗೆ ಒಪ್ಪುವ ಕಾರಣ ಏನಿರಬಹುದು?"

ಅದಕ್ಕೆ ಉತ್ತರಿಸಲು ಲೂಸಿ ಸುಮಾರು ಸಮಯ ತೆಗೆದುಕೊಂಡಳು. ನಂತರ ತುಂಡುತುಂಡಾಗಿ ಉತ್ತರ ಕೊಟ್ಟಳು. 'ಹಾಗಂತ ಹೇಳಲು ಬಹಳ ಪ್ರಯತ್ನ ಮಾಡಿದೆ. ಅವನಿಗೆ ಅರ್ಥವಾಗಲಿಲ್ಲ. ಅವನ ದುಃಖ ಮಿತಿಮೀರಿತ್ತು. ನನ್ನನ್ನು ಕಳೆದುಕೊಳ್ಳುವ ಭಯ ಕಾಡುತ್ತಿತ್ತು. ಅವನಿಂದ ದೂರವಿದ್ದು ಅವನಿಗೆ ಅಂಟಿಕೊಳ್ಳದೆ ಸಂತೈಸುವುದು ನನ್ನ ಕೈಯಿಂದಾಗುವುದಿಲ್ಲ ಎಂದು ಅನ್ನಿಸಿತು... ಹಾಗಾಗಿ ಮದುವೆಯಾದ ಮೇಲೆ ಅರ್ಥಮಾಡಿಸೋಣ ಎಂದುಕೊಂಡೆ – ಯಾಕೆಂದರೆ ಮದುವೆಯ ನಂತರ ಅವನಿಗೆ ನನ್ನನ್ನು ಕಳೆದುಕೊಳ್ಳುವ ಭಯ ಇರುವುದಿಲ್ಲವಲ್ಲ?... ಆದರೆ ಮದುವೆಯ ನಂತರ ಲೋಚನ್ ನಿರಾಳವಾಗಿಬಿಟ್ಟ. ಅವನು ಏನು ಸಾಧಿಸಬೇಕೆಂದು ಅಂದುಕೊಂಡಿದ್ದನೋ ಅದು ಸಾಧಿಸಿದ ನಂತರ ಅವನಿಗೆ ಬದಲಾಗುವ ಅಗತ್ಯ ಕಾಣಲಿಲ್ಲ. ಅದನ್ನು ಎತ್ತಿ ತೋರಿಸಿದಾಗ ಅವನು ಅದಕ್ಕೆ ವಿಶೇಷ ಕಾಳಜಿ ವಹಿಸಲಿಲ್ಲ. ಅಲ್ಲಿಂದಲೇ ನಮ್ಮ ಜಗಳ ಶುರುವಾಗಿದ್ದು.'

ಇಲ್ಲೇನು ನಡೆಯಿತು? ಹೆಚ್ಚಿನವರು ಮದುವೆಯಾದರೆ ಸಾಕು, ಸಂಗಾತಿಯ ಮೇಲೆ ಸ್ವಾಮ್ಯ, ಹಕ್ಕು ಲಭಿಸುತ್ತದೆ ಎಂದು ಭಾವಿಸುತ್ತಾರೆ. ಆದರೆ ದಾಂಪತ್ಯದ ಬಗೆಗೆ ಯೋಚಿಸುವುದಿಲ್ಲ. ಇಂಥವರಿಗೆ ಮದುವೆ ಬೇರೆ ದಾಂಪತ್ಯ ಬೇರೆ ಎನ್ನುವ ಕಲ್ಪನೆ ಇರುವುದಿಲ್ಲ.

ನನಗಿಲ್ಲಿ ತಿಳಿದುಕೊಳ್ಳುವ ವಿಷಯ ಬಹಳಷ್ಟಿದೆ ಎನ್ನಿಸಿತು.

**ಸೂಚನೆ: ಓದುಗರು ತಮ್ಮ ಸಮಸ್ಯೆಗಳಿಗೆ ಸಲಹೆ ಬಯಸಿದಲ್ಲಿ ಪತ್ರವನ್ನು ಬರೆಯಬಹುದು. ವಿಳಾಸ: ಸುಖೀ ದಾಂಪತ್ಯ ವಿಭಾಗ, ಸುಧಾ ವಾರಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 01**